ರಾಜ್ಯದಲ್ಲಿ ನಿವೇಶನರಹಿತರ ಬಗ್ಗೆ

೨೦೫. ಶ್ರೀ ಜಿ. ರಾಜುಗೌಡ, ಎಂಎಲ್‌ಎ (ಹನೂರು).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ನಿವೇಶನರಹಿತರ ಸಂಖ್ಯೆ ಎಷ್ಟು ? ಇವರ ಪೈಕಿ ಕಳೆದ ಮೂರು ವರ್ಷಗಳಿಂದ ೩೧.೦೨.೮೮ರವರೆವಿಗೆ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಉಳಿದವರಿಗೆ ನಿವೇಶನ ಪೂರೈಸಲು ಇನ್ನೆಷ್ಟು ಕಾಲಾವಧಿ ಸರ್ಕಾರಕ್ಕೆ ಬೇಕಾಗಿದೆ ?

ಇ) ನಿವೇಶನಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಇದುವರೆವಿಗೂ ಇನ್ನು ಕೊಡ ಬೇಕಾಗಿರುವ ಪರಿಹಾರ ಧನದ ಮೊತ್ತ ಎಷ್ಟು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ)

೩,೯೫,೪೪೯	
೧೯೮೫-೮೬	೬೫,೯೮೯ ನಿವೇಶನಗಳು
೧೯೮೬-೮೭	೪೫,೨೦೩ ನಿವೇಶನಗಳು
೧೯೮೭-೮೮	೪೬,೬೦೮ ನಿವೇಶನಗಳು
೧.೪.೮೮ ರಿಂದ	
೩೧.೦೨.೮೮ರವರೆವಿಗೆ	೨೫,೦೬೮ ನಿವೇಶನಗಳು
ಒಟ್ಟು	೧,೬೨,೬೭೫ ನಿವೇಶನಗಳು

ಆ) ಸಾಲಿಯಾನ ೪೦,೦೦೦ ನಿವೇಶನಗಳನ್ನು ಹಂಚಲು ಗುರಿ ಹಾಕಿಕೊಂಡಿದ್ದು ವರ್ಷೇ ವರ್ಷೇ ನಿವೇಶನಗಳನ್ನು ಹಂಚಲಾಗುತ್ತಿದೆ.

ಇ) ೧,೬೩,೦೬,೩೨೬.೯೦

ಧಾರವಾಡ ಬಡಾವಣೆಗಳಲ್ಲಿ ಚಿಕ್ಕ ಮಾರ್ಕೆಟ್ ವ್ಯವಸ್ಥೆ ಬಗ್ಗೆ

೨೪೫. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ನಗರ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಶಹರದಲ್ಲಿ ಅನೇಕ ಬಡಾವಣೆಗಳು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಾದರೆ, ಈ ಎಲ್ಲಾ ಬಡಾವಣೆಗಳಲ್ಲಿ ಚಿಕ್ಕ ಮಾರ್ಕೆಟ್ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರದಲ್ಲಿದೆಯೇ ? ಹಾಗಿದ್ದರೆ ಆ ನಿವೇಶನಗಳನ್ನು ಗುರ್ತಿಸಿರುವ ವಿವರ ನೀಡಲಾಗುವುದೇ ?

ಇ) ಧಾರವಾಡದ ಸೂಪರ್ ಮಾರ್ಕೆಟ್‌ದ ಹೊಸ ಕಟ್ಟಡದ ಯೋಜನೆ ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಇಲ್ಲ.

ಆದರೆ ಮಾಳಮಡ್ಡಿ ಎಮ್ಮಿಕೇರಿಯಲ್ಲಿ ಮಾರ್ಕೆಟ್ ಕಟ್ಟುವ ಹವಣಿಕೆ ಇದೆ.

ಇ) ರಾಷ್ಟ್ರೀಯ ಬ್ಯಾಂಕಿನಿಂದ ಸಾಲದ ಹಣ ಬಿಡುಗಡೆಯಾದ ಕೂಡಲೇ ಸೂಪರ್ ಮಾರ್ಕೆಟ್ ಕಟ್ಟುವ ಕೆಲಸವನ್ನು ಪ್ರಾರಂಭಿಸಲಾಗುವುದು.